# ಕರ್ನಾಟಕ ವಿಧಾನಸಭೆ

## ಹದಿನೈದನೇ ವಿಧಾನಸಭೆ

## (ನಾಲ್ಕನೇ ಅಧಿವೇಶನ)

### ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

## 23ನೇ ಜುಲೈ 2019

----

**[ಸಣ್ಣ ಕೈಗಾರಿಕೆ ಸಚಿವರು - ಸಾರಿಗೆ ಸಚಿವರು - ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು - ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು - ಸಕ್ಕರೆ ಸಚಿವರುಹಾಗೂ ಮುಖ್ಯ ಮಂತ್ರಿಗಳು ].**

**ಒಟ್ಟು ಪ್ರಶ್ನೆಗಳು - 49**

----

15/4/1205

**ಬಸ್ ನಿಲ್ದಾಣ ಕಾಮಗಾರಿ**

**1017 ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಸಾರಿಗೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ನೂತನ ಕೇಂದ್ರ ಬಸ್ ನಿಲ್ದಾಣ ಕಾಮಗಾರಿ ಯಾವಾಗ ಆರಂಭಿಸಲಾಯಿತು; ಇದು ಎಷ್ಟು ಮೊತ್ತದ ಕಾಮಗಾರಿ; ಗುತ್ತಿಗೆ ನಿಯಮಗಳಂತೆ ಯಾವ ಕಾಲಮಿತಿಯೊಳಗೆ ಮುಗಿಯಬೇಕಾಗಿತ್ತು; ಇನ್ನೂ ಈ ಕಾಮಗಾರಿಯು ಮುಗಿಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿಳಂಬ ಮಾಡಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಆ) ಬೆಳಗಾವಿ ನಗರದಿಂದ ಚನ್ನೈ, ತಿರುಪತಿ, ನಾಸಿಕ, ಮುಂಬೈ, ಬೆಂಗಳೂರು, ಹೈದ್ರಾಬಾದ್ ಮುಂತಾದ ದೂರದ ನಗರಗಳಿಗೆ ಸಂಚರಿಸುತ್ತಿರುವ ರಾಜಹಂಸ, ಕ್ಲಬ್‌ಕ್ಲಾಸ್, ಗೋಲ್ಡ್‌ಕ್ಲಾಸ್, ಕರೋನ ಸ್ಲೀಪರ್ ಸಾರಿಗೆ ಬಸ್ಸುಗಳು ಎಷ್ಟು; (ವಿವರ ನೀಡುವುದು) ಅವು ಕ್ರಮಿಸಿದ ಕಿ.ಮಿಗಳು ಎಷ್ಟು; ಅವು ನಿಷ್ಕ್ರೀಯ ಹಂತವನ್ನು ತಲುಪಿವೆಯೇ; (ವಿವರ ನೀಡುವುದು)

ಇ) ಇಂತಹ ಮಾರ್ಗಗಳ ಮೇಲೆ ಹಳೆಯ ವಾಹನಗಳು ಸಂಚರಿಸುತ್ತಿರುವುದರಿಂದ ಪ್ರಯಾಣಿಕರಿಗೆ ಹಾಗೂ ಸಾರಿಗೆ ಸಿಬ್ಬಂದಿಗಳು ಅನುಭವಿಸುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ವಾಹನಗಳ ಬದಲಾವಣೆಗೆ ಕೈಗೊಂಡಿರುವಕ್ರಮಗಳೇನು;

ಈ) ಬೆಳಗಾವಿ ವಿಭಾಗಕ್ಕೆ ಮೇಲೆ ವಿವರಿಸಿದ ಸಾರಿಗೆ ಮಾರ್ಗಗಳಿಗೆ ಹೊಸ ವಾಹನಗಳನ್ನು ಒದಗಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಮತ್ತು ಎಷ್ಟು ವಾಹನಗಳನ್ನು ಒದಗಿಸಲಾಗುವುದು?

----

15/4/1206

## ವಿದ್ಯುತ್ ತಂತಿಗಳ ತೆರವುಗೊಳಿಸುವಿಕೆ

1018 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳು ಜೋತುಬಿದ್ದು ವಿದ್ಯುತ್ ಅವಘಡಗಳಿಗೆ ನಾಂದಿಯಾಗುತ್ತಿರುವುದರಿಂದ ಅವುಗಳನ್ನು ತೆರವುಗೊಳಿಸಲು ಯಾವ ಶಾಸಕರು ವಿನಂತಿಸಿದ್ದಾರೆ;
ಆ) ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವುಗಳ ತೆರವು ಮತ್ತು ದುರಸ್ಥಿಗಾಗಿ ಕೈಗೊಂಡಿರುವ ಕ್ರಮಗಳು ಯಾವುವು; (ಪ್ರದೇಶವಾರು/ ಗ್ರಾಮವಾರು ಮಾಹಿತಿ ನೀಡುವುದು)
ಇ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು;
ಈ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ನಗರ ಮತ್ತು ಗ್ರಾಮೀಣ ವ್ಯಾಪ್ತಿಯಲ್ಲಿ ಬಹಳ ದಿನಗಳಿಂದ ಬದಲಾವಣೆ/ ದುರಸ್ಥಿಗಳಿಲ್ಲದೇ ಇರುವ ಟಿಸಿಗಳ ಸಂಖ್ಯೆ ಹಾಗೂ ಸ್ಥಳಗಳ ವಿವರ ನೀಡುವುದು; ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ದುರಸ್ಥಿ ಹಾಗೂ ಬದಲಾವಣೆಗೆ ಕೈಗೊಂಡಿರುವ ಕ್ರಮಗಳೇನು;
ಉ) ಇಲಾಖೆಯಲ್ಲಿಇಲ್ಲಿಯವರೆಗೆ ಅನುಕಂಪದ ಆಧಾರದ ಮೇಲೆ ವಿವಿಧ ಹುದ್ದೆಗಳಿಗೆ ಉದ್ಯೋಗ ಕಲ್ಪಿಸಲು ಬಾಕಿ ಇರುವ ಪ್ರಕರಣಗಳೆಷ್ಟು; (ವಿವರ ನೀಡುವುದು)
ಊ) ಅನೇಕ ಪ್ರಕರಣಗಳು ಬಹಳಷ್ಟು ದಿನಗಳಿಂದ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು; ಮತ್ತು ಯಾವಾಗ ಇತ್ಯರ್ಥಗೊಳಿಸಲಾಗುವುದು? (ಮಾಹಿತಿ ಒದಗಿಸುವುದು)

----

15/4/1208

## ಮದ್ಯದಂಗಡಿಗಳಿಗೆ ಪರವಾನಿಗೆ

1019 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ದಿನಾಂಕ:01012017 ರಿಂದ 05072019ರ ವರೆಗಿನ ಅವಧಿಯಲ್ಲಿ ಎಮ್ಎಸ್ಐಎಲ್ ವತಿಯಿಂದ ಹಾಗೂ ಸೇಲ್7 ರಡಿಯಲ್ಲಿ ಬಾರ್‌ಗಳಿಗೆ (ಲಾಡ್ಜಿಂಗ್ ಮತ್ತು ಬೋರ್ಡಿಂಗ್) ಎಷ್ಟು ಪರವಾನಿಗೆ ನೀಡಲಾಗಿದೆ; (ಜಿಲ್ಲಾವಾರು, ಮತಕ್ಷೇತ್ರವಾರು, ವರ್ಷವಾರು ಪ್ರತ್ಯೇಕ ವಿವರ ನೀಡುವುದು)
ಆ) ಘನ ನ್ಯಾಯಾಲಯದ ಆದೇಶದಂತೆ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲಿದ್ದು ಸ್ಥಳಾಂತರವಾಗಿರುವ ಎಮ್ಎಸ್ಐಎಲ್ ಹಾಗೂ ಇತರ ಬಾರ್‌ಗಳ ಸಂಖ್ಯೆ ಎಷ್ಟು; (ಅಂಗಡಿಗಳ ಹೆಸರು, ವಿಳಾಸಗಳ ವಿವರ ನೀಡುವುದು ಹಾಗೂ ಅದಕ್ಕಿರುವ ನಿಯಮ ಮತ್ತು ಕಾನೂನುಗಳ ವಿವರ ನೀಡುವುದು)
ಇ) ನ್ಯಾಯಾಲಯದ ಆದೇಶದಂತೆ ಗ್ರಾಮೀಣ ಪ್ರದೇಶಗಳಲ್ಲಿರುವ ಅಂಗಡಿಗಳನ್ನು ನಗರ ಪ್ರದೇಶಗಳಿಗೆ ಸ್ಥಳಾಂತರಿಸಲು ಅವಕಾಶವಿದೆಯೇ; ಇದ್ದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅಂತಹ ಎಷ್ಟು ಅಂಗಡಿಗಳನ್ನು

ಎಲ್ಲಿಂದ ಎಲ್ಲಿಗೆ ಸ್ಥಳಾಂತರಿಸಲಾಗಿದೆ; (ಮತಕ್ಷೇತ್ರವಾರು, ಮೊದಲಿದ್ದ ಹಾಗೂ ಸ್ಥಳಾಂತರಗೊಂಡಿರುವ ವಿಳಾಸದ ವಿವರಗಳನ್ನು ನೀಡುವುದು)

ಈ) ಬೆಳಗಾವಿ ನಗರದ ವಿವಿಧ ಕಡೆಗಳಲ್ಲಿ ಅನಧಿಕೃತವಾಗಿ ಸಾರಾಯಿಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;

ಉ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ಪಾರ್ಕ್‌ಗಳಲ್ಲಿ, ಮುಖ್ಯರಸ್ತೆಗಳಲ್ಲಿ ಖುಲ್ಲಾ ಜಾಗಗಳಲ್ಲಿ ಶಾಲಾ/ ಕಾಲೇಜುಗಳ ಮೈದಾನಗಳಲ್ಲಿ, ದೇವಸ್ಥಾನಗಳ ಅಕ್ಕಪಕ್ಕ ರಾತ್ರಿ ವೇಳೆಯಲ್ಲಿ ಸಾರಾಯಿ ಕುಡಿದು ಗಲಾಟೆ ಮಾಡುತ್ತಿರುವುದು, ಸಾರ್ವಜನಿಕ ಜನಜೀವನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಕೈಗೊಂಡಿರುವ ಮತ್ತು ಕೈಗೊಳ್ಳುವ ಕ್ರಮಗಳೇನು?

----

15/4/1209

## ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆ

1020 **ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯಲ್ಲಿ ಮರಳಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಯ ಪರಿಹಾರಕ್ಕೆ ಕೈಗೊಂಡಿರುವ ಕ್ರಮಗಳೇನು;

ಆ) ಬೆಳಗಾವಿ ಜಿಲ್ಲೆಯಲ್ಲಿರುವ ವಿವಿಧ ಬಗೆಯ ಗಣಿಗಳ ಸಂಪೂರ್ಣ ವಿವರಗಳನ್ನು ನೀಡುವುದು; ಅವುಗಳಿಂದ ಸರ್ಕಾರಕ್ಕೆ ತಿಂಗಳುವಾರು ಜಮಾ ಆಗುತ್ತಿರುವ ಸೆಸ್ ಹಣ ಎಷ್ಟು;

ಇ)ಈ ಜಿಲ್ಲೆಯಲ್ಲಿ ಅನಧಿಕೃತವಾಗಿ ಮರಳು ಹಾಗೂ ಇತರ ವಿಧದ ಗಣಿ ಕೈಗಾರಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳ ವಿವರ ನೀಡುವುದು ಹಾಗೂ ಅವುಗಳ ವಿರುದ್ಧ ಕೈಗೊಂಡಿರುವ ಕ್ರಮಗಳು ಏನು; (ವಿವರ ನೀಡುವುದು)

ಈ) ಡಿ.ಎಮ್.ಎಫ್ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಗಳು ಸಲ್ಲಿಕೆಯಾಗಿವೆಯೇ; ಆಗಿದ್ದಲ್ಲಿ ಅವುಗಳ ವಿವರ ನೀಡುವುದು; ಯಾವ ಶಾಸಕರು ಯಾವ ಕಾಮಗಾರಿಗಳಿಗೆ ಪ್ರಸ್ತಾಪಿಸಿದ್ದಾರೆ;

ಉ) ಅವುಗಳಲ್ಲಿ ಅನುಮೋದನೆ ಮಾಡಿದ/ತಿರಸ್ಕೃತಗೊಳಿಸಿದ ಕಾಮಗಾರಿಗಳ ವಿವರ ನೀಡುವುದು; ತಿರಸ್ಕೃತಗೊಳಿಸಲು ಕಾರಣಗಳನ್ನುನೀಡುವುದು?

----

15/4/1358

## ಸೌರಶಕ್ತಿ ಹಾಗೂ ಪವನ ವಿದ್ಯುತ್ ಸ್ಥಾವರಗಳು

1021 **ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೊಪ್ಪಳ ಜಿಲ್ಲೆಯಲ್ಲಿ ಸೌರಶಕ್ತಿ ಹಾಗೂ ಪವನ ಶಕ್ತಿ ವಿದ್ಯುತ್ ಸ್ಥಾವರಗಳನ್ನು ಅಳವಡಿಸಲು ಸರ್ಕಾರದಿಂದ ಮಂಜೂರು ಮಾಡಿರುವ ಜಮೀನು ಎಷ್ಟು?

ಆ) ಈ ಸ್ಥಾವರಗಳ ಸ್ಥಾಪನೆಗೆ ಎಷ್ಟು ಖಾಸಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಇ) ಈ ಸ್ಥಾವರಗಳಿಂದ ಎಷ್ಟು ವಿದ್ಯುತ್ ಉತ್ಪಾದಿಸಲಾಗಿದೆ ಹಾಗೂ ವಿತರಿಸಲಾಗಿದೆ;
ಈ) ಈ ಸ್ಥಾವರಗಳಲ್ಲಿ ಕೆಲಸ ನಿರ್ವಹಿಸಲು ಸ್ಥಳೀಯರನ್ನು ನೇಮಕ ಮಾಡಿಕೊಳ್ಳಲಾಗಿದೆಯೇ; (ಮಾಡಿದ್ದಲ್ಲಿ ಸಂಪೂರ್ಣ ವಿವರ ಒದಗಿಸುವುದು)
ಉ) ಸದರಿ ಸ್ಥಾವರಗಳಿಗೆ ಭೂ ಮಂಜೂರಾತಿಗಾಗಿ ವಿಧಿಸಿರುವ ಷರತ್ತುಗಳು ಯಾವುವು?

----

15/4/1359

**ಭಾಗ್ಯಜ್ಯೋತಿ ವಿದ್ಯುತ್**

**1022 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೊಪ್ಪಳ ಜಿಲ್ಲೆಯಲ್ಲಿ ಭಾಗ್ಯಜ್ಯೋತಿ ವಿದ್ಯುತ್ ಬಳಕೆದಾರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)
ಆ) ಭಾಗ್ಯಜ್ಯೋತಿ ಬಳಕೆದಾರರಿಗೆ ವಿದ್ಯುತ್ ಕಳ್ಳತನ ಆರೋಪದಡಿ ದಂಡ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಈವರೆಗೂ ಯಾವ ಯಾವ ಬಳಕೆದಾರರಿಗೆ ದಂಡ ವಿಧಿಸಲಾಗಿದೆ; ಭಾಗ್ಯಜ್ಯೋತಿ ಫಲಾನುಭವಿಗಳಿಗೆ ದಂಡ ವಿಧಿಸಲು ಅವಕಾಶವಿದೆಯೇ;
ಈ) ಭಾಗ್ಯಜ್ಯೋತಿ ಯೋಜನೆಯ ಮಾನದಂಡಗಳೇನು;
ಉ) ಪ್ರಸ್ತುತ ಇದು ಚಾಲ್ತಿಯಲ್ಲಿದೆಯೇ? (ಮಾಹಿತಿ ಒದಗಿಸುವುದು)

----

15/4/1366

**ಖಾಲಿ ಇರುವ ಹದ್ದೆಗಳು**

**1023 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೊಪ್ಪಳ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ಹುದ್ದೆಗಳು ಖಾಲಿಯಿರುತ್ತವೆ; (ಮಾಹಿತಿ ನೀಡುವುದು);
ಇ) ಪ್ರಸ್ತುತ ಜಿಲ್ಲೆಯಲ್ಲಿ ಅತ್ಯಂತ ಬರ ಪರಿಸ್ಥಿತಿ ಇದ್ದು ಬರ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಈ ಹುದ್ದೆಗಳು ಖಾಲಿ ಇರುವುದರಿಂದ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು?

----

15/4/792

**ಬಸ್ ನಿಲ್ದಾಣ ಕಾಮಗಾರಿ**

**1024 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಸಾರಿಗೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಯನ್ನು ಎಷ್ಟು ಅನುದಾನದಲ್ಲಿ ಯಾವಾಗ ಪ್ರಾರಂಭಿಸಲಾಯಿತು;
ಆ) ಈ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ; ಕಾಮಗಾರಿ ಪೂರ್ಣಗೊಂಡಿದೆಯೇ;
ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮವೇನು; ಯಾವಾಗ ಪೂರ್ಣಗೊಳಿಸಲಾಗುವುದು?

----

15/4/793

## ಕೈಗಾರಿಕಾ ವಲಯಗಳು

**1025 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿಯ ಸುತ್ತಮುತ್ತ ಎಷ್ಟು ಕೈಗಾರಿಕಾ ವಲಯಗಳಿವೆ; (ವಿವರ ನೀಡುವುದು)
ಆ) ಸದರಿ ಕೈಗಾರಿಕೆಗಳಿಗೆ ಎಷ್ಟು ಭೂಮಿ ಮೀಸಲಿರಿಸಲಾಗಿದೆ;
ಇ) ಈ ಕೈಗಾರಿಕಾ ವಲಯಗಳಲ್ಲಿ ಯಾವ ಯಾವ ಕಂಪನಿಗಳಿಗೆ ಭೂಮಿ ವಿತರಿಸಲಾಗಿದೆ; (ಮಾಹಿತಿ ನೀಡುವುದು)
ಈ) ಭೂಮಿ ಪಡೆದು ಕೈಗಾರಿಕೆ ಆರಂಭಿಸಿರುವ ಕಂಪನಿಗಳಾವುವು; ಇನ್ನೂ ಕಾರ್ಯಾರಂಭ ಮಾಡದಿರುವ ಕಂಪನಿಗಳಾವುವು? (ಮಾಹಿತಿ ನೀಡುವುದು)

----

15/4/800

## ಮರಳು ಕೊರತೆ

**1026 ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಡಗು ಜಿಲ್ಲೆಯಲ್ಲಿ ಗಂಭೀರ ಸ್ಥಿತಿಗೆ ತಲುಪಿರುವ ಮರಳಿನ ಸಮಸ್ಯೆಯನ್ನು ಪರಿಹರಿಸುವಲ್ಲಿ ಸರ್ಕಾರ ವಿಫಲವಾಗಲು ಕಾರಣವೇನು;
ಆ) ಆಶ್ರಯ ಯೋಜನೆಯಡಿಯಲ್ಲಿ ಹಾಗೂ ಸಣ್ಣ ಪುಟ್ಟ ಮನೆ ನಿರ್ಮಾಣಕ್ಕೆ, ಜಲ ಪ್ರಳಯದಲ್ಲಿ ಮನೆ ಕಳೆದುಕೊಂಡವರಿಗೆ ಹಾಗೂ ರಸ್ತೆ ನಿರ್ಮಾಣಕ್ಕೆ ಮರಳಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಬಂದಿದ್ದಲ್ಲಿ, ಯಾವಾಗ ಮರಳು ನೀಡಲಾಗುವುದು ಮರಳು ಯಾರ್ಡ್‌ಗಳನ್ನು ನಿರ್ಮಿಸಲಾಗಿದೆ; (ಪೂರ್ಣ ವಿವರ ನೀಡುವುದು)
ಈ) ಕೊಡಗು ಜಿಲ್ಲೆಯಲ್ಲಿ ಎಷ್ಟು ಕಲ್ಲುಕೋರೆ ಇದೆ; ಎಷ್ಟು ಕ್ರಷರ್ ಕಾರ್ಯಾಚರಣೆಯಲ್ಲಿದೆ ; ಯಾವ

ಯಾವ ಕ್ರಷರ್ ಮತ್ತು ಕೋರೆಗೆ ಎಷ್ಟೆಷ್ಟು ಸಮಯದ ವರೆಗೆ ಪರವಾನಿಗೆ ನೀಡಲಾಗಿದೆ;
ಉ) ಹೊಸದಾಗಿ ಪರವಾನಿಗೆ ನೀಡಲು ಇರುವ ಮಾನದಂಡಗಳೇನು? (ಪೂರ್ಣ ವಿವರ ನೀಡುವುದು)

----

15/4/1360

## ಮುಖ್ಯಮಂತ್ರಿಗಳ ಪರಿಹಾರ ನಿಧಿ

1027 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ 2017 ರಿಂದ 2019 ರ ವರೆಗೆ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಾಯ್ದಿರಿಸಿರುವ ಅನುದಾನ ಎಷ್ಟು; ಸದರಿ ಅನುದಾನದಲ್ಲಿ ಪರಿಹಾರ ಧನ ಪಡೆದುಕೊಂಡವರ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಕಾಯಿಲೆವಾರು ಫಲಾನುಭವಿಗಳ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)
ಆ) ಸದರಿ ಅನುದಾನವನ್ನು ಫಲಾನುಭವಿಗಳು ಪಡೆದುಕೊಳ್ಳಲು ಸರ್ಕಾರವು ರೂಪಿಸಿರುವ ಮಾನದಂಡಗಳೇನು; (ವಿವರವಾದ ಮಾಹಿತಿ ನೀಡುವುದು)
ಇ) ಈ ಅವಧಿಯಲ್ಲಿ ಪರಿಹಾರ ಧನ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು; ಈ ಅರ್ಜಿಗಳ ಪೈಕಿ ಈಗಾಗಲೇ ಅನುದಾನ ಬಿಡುಗಡೆ ಮಾಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಬಾಕಿ ಉಳಿಸಿಕೊಳ್ಳಲು ಕಾರಣಗಳೇನು (ವಿವರವಾದ ಮಾಹಿತಿ ನೀಡುವುದು)
ಈ) ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ ಪಡೆಯುವಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಅವ್ಯವಹಾರಗಳನ್ನು ತಡೆಗಟ್ಟುವಲ್ಲಿ ಸರ್ಕಾರವುತೆಗೆದುಕೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)
ಉ) ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಜನ ಫಲಾನುಭವಿಗಳು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವ ಯಾವ ಕಾಯಿಲೆಗಳಿಗಾಗಿ ಅನುದಾನ ಪಡೆದುಕೊಂಡಿದ್ದಾರೆ? (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

----

15/4/1362

## ಜಿಂದಾಲ್ ಕಾರ್ಖಾನೆ ಸ್ಥಾಪನೆ

1028 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ)ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಜಿಂದಾಲ್ ಕಾರ್ಖಾನೆಯು ಯಾವ ವರ್ಷದಲ್ಲಿ ಪ್ರಾರಂಭವಾಯಿತು; ಜಿಂದಾಲ್ ಸಂಸ್ಥೆಗೆ ಕೈಗಾರಿಕೆ ಸ್ಥಾಪನೆ ಮಾಡಲು ಸರ್ಕಾರವು ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ; (ಸಂಪೂರ್ಣ ಮಾಹಿತಿ ನೀಡುವುದು)
ಆ) ಈ ಕೈಗಾರಿಕೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ರಾಜ್ಯ ಸರ್ಕಾರ ಹಾಗೂ ಜಿಂದಾಲ್ ಸಂಸ್ಥೆಯ ನಡುವೆ ಯಾವ ರೀತಿಯ ಒಪ್ಪಂದಗಳನ್ನು (ಎಂ.ಓ.ಯು) ಮಾಡಿಕೊಳ್ಳಲಾಗಿದೆ; ಸದರಿ ಒಪ್ಪಂದದಲ್ಲಿ ಜಿಂದಾಲ್ ಸಂಸ್ಥೆಯವರಿಗೆ ಯಾವ ರೀತಿಯ ಷರತ್ತುಗಳನ್ನು ವಿಧಿಸಲಾಗಿದೆ; ಈ ಷರತ್ತುಗಳನ್ನು ಸಂಸ್ಥೆಯು ಪಾಲಿಸುತ್ತಿದೆಯೇ ಅಥವಾ ಇಲ್ಲವೇ; ಇಲ್ಲವಾದಲ್ಲಿ ಸದರಿ ಸಂಸ್ಥೆಯ ವಿರುದ್ಧ ಸರ್ಕಾರವು ಕೈಗೊಂಡಿರುವ

ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)
ಇ) ಜಿಂದಾಲ್ ಸಂಸ್ಥೆಯಲ್ಲಿ ಪ್ರಸ್ತುತ ಎಷ್ಟು ಜನ ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದಾರೆ; ಅದರಲ್ಲಿ ಖಾಯಂ ನೌಕರರ ಸಂಖ್ಯೆ ಎಷ್ಟು; ತಾತ್ಕಾಲಿಕ ನೌಕರರ ಸಂಖ್ಯೆ ಎಷ್ಟು; (ವರ್ಷವಾರು, ಸಂಪೂರ್ಣ ಮಾಹಿತಿ ನೀಡುವುದು)
ಈ) ಜಿಂದಾಲ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟು ಉದ್ಯೋಗಿಗಳಲ್ಲಿ ಸ್ಥಳೀಯರಿಗೆ ಎಷ್ಟು ಉದ್ಯೋಗ ಕಲ್ಪಿಸಿಕೊಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

----

15/4/1407

**ಸಣ್ಣ ಕೈಗಾರಿಕೆಗಳ ಸ್ಥಾಪನೆ**

**1029 ಬೆಳ್ಳಿ ಪ್ರಕಾಶ್ (ಕಡೂರು):**

ಮಾನ್ಯ **ಸಣ್ಣ ಕೈಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಸ್ಥಾಪನೆ ಮಾಡಲು ನೀಡುತ್ತಿರುವ ಸೌಲಭ್ಯಗಳು ಯಾವುವು;( ವಿವರ ನೀಡುವುದು)
ಆ) ಸಣ್ಣ ಕೈಗಾರಿಕೆಗಳ ಸ್ಥಾಪನೆಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಕಲ್ಪಿಸಲು ಸರ್ಕಾರವು ಕ್ರಮಕೈಗೊಳ್ಳಲಿದೆಯೇ;( ವಿವರ ನೀಡುವುದು)
ಇ) ಕಡೂರು ತಾಲ್ಲೂಕು ಬರಪೀಡಿತ ಪ್ರದೇಶವಾಗಿರುವುದರಿಂದ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ( ವಿವರ ನೀಡುವುದು)

----

15/4/1408

**ನಿರಂತರ ಜ್ಯೋತಿ ಯೋಜನೆ**

**1030 ಬೆಳ್ಳಿ ಪ್ರಕಾಶ್ (ಕಡೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಿರಂತರ ಜ್ಯೋತಿ ಕಾರ್ಯಕ್ರಮದಡಿಯಲ್ಲಿ ವಿದ್ಯುತ್ ಕಂಬಗಳನ್ನು ರಸ್ತೆಯ ಬದಿಯಲ್ಲಿ ಅಳವಡಿಸುತ್ತಿರುವುದರಿಂದ ಸಾರಿಗೆ ವಾಹನಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು;
ಆ) ಪಂಡಿತ್ ದೀನ್ ದಯಾಳ್ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿನ ಕಾಮಗಾರಿಗಳು ಯಾವ ಹಂತದಲ್ಲಿವೆ;
ಇ) ಈ ಯೋಜನೆಯಡಿ ಕಾಮಗಾರಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

----

15/4/1409

**ಕೈಗಾರಿಕೆ ವಸಾಹತು ಸ್ಥಾಪನೆ**

**1031 ಬೆಳ್ಳಿ ಪ್ರಕಾಶ್ (ಕಡೂರು):**

ಮಾನ್ಯ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಡೂರು ತಾಲ್ಲೂಕು ಡಾ: ನಂಜುಂಡಪ್ಪ ವರದಿಯನ್ವಯ ಶಾಶ್ವತ ಬರಪೀಡಿತ ಪ್ರದೇಶವಾಗಿದ್ದು, ಜನರು ಗುಳೆ ಹೋಗುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಆ) ಈ ತಾಲ್ಲೂಕಿನಲ್ಲಿ ಕೈಗಾರಿಕೆ ವಸಾಹತು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ; ಇದ್ದಲ್ಲಿ ಮಾಹಿತಿ ಒದಗಿಸುವುದು;
ಇ) ಕೈಗಾರಿಕೆ ವಸಾಹತು ಸ್ಥಾಪಿಸಲು ಸರ್ಕಾರ ಈವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು( ವಿವರ ನೀಡುವುದು) ?

----

15/4/794

**ಅಕ್ರಮ ಸಕ್ರಮ ಯೋಜನೆ**

**1032 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರೈತರ ಪಂಪ್‌ಸೆಟ್‌ಗಳಿಗೆ ಅಕ್ರಮ-ಸಕ್ರಮ ಯೋಜನೆಯಡಿ ಇರುವ ಮಾನದಂಡಗಳೇನು ಮತ್ತು ಸರ್ಕಾರಕ್ಕೆ ಎಷ್ಟು ಹಣ ಪಾವತಿಸಬೇಕು;
ಆ) ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಅಥವಾ ಈ ಯೋಜನೆಯ ಆರಂಭದಿಂದ ಇಲ್ಲಿಯವರೆಗೆ ರೈತರಿಂದ ಎಷ್ಟು ಅಕ್ರಮ-ಸಕ್ರಮ ಅರ್ಜಿಗಳು ಬಂದಿವೆ; ಅವುಗಳಲ್ಲಿ ಎಷ್ಟು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ; ಬಾಕಿ ಉಳಿದಿರುವ ಅರ್ಜಿಗಳೆಷ್ಟು; (ಅರ್ಜಿ ಸಲ್ಲಿಸಿದ ರೈತರ ಹೆಸರು, ಸಂಪರ್ಕ ಕಲ್ಪಿಸಿದ ರೈತರ ಹೆಸರು ಮತ್ತು ಬಾಕಿ ಉಳಿದಿರುವ ರೈತರ ಹೆಸರುಗಳ ಪಟ್ಟಿ ನೀಡುವುದು)
ಇ) ರೈತರ ಪಂಪ್‌ಸೆಟ್‌ಗಳಿಗೆ ಅಕ್ರಮ-ಸಕ್ರಮ ಯೋಜನೆಯಡಿ ವಿದ್ಯುತ್ ಒದಗಿಸುವ ಯೋಜನೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು?

----

15/4/795

**ಸೌಭಾಗ್ಯಲಕ್ಷ್ಮೀ ಮತ್ತು ದೀನದಯಾಳ ಉಪಾಧ್ಯಾಯ ವಿದ್ಯುತ್ ಸಂಪರ್ಕ ಯೋಜನೆ**

**1033 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಪ್ರಧಾನಮಂತ್ರಿಗಳ ಸೌಭಾಗ್ಯಲಕ್ಷ್ಮೀ ಮತ್ತು ದೀನದಯಾಳ ಉಪಾಧ್ಯಾಯ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಗಳನ್ನು ಜಾರಿಗೆ ತರಲಾಗಿದೆಯೇ;
ಆ) ಹಾಗಿದ್ದಲ್ಲಿ, ಸದರಿ ಯೋಜನೆಗಳಲ್ಲಿ ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ;

ಇ) ಆಯ್ಕೆ ಮಾಡಿಕೊಂಡ ಎಷ್ಟು ಗ್ರಾಮಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ; ಯಾವ ಗ್ರಾಮಗಳಲ್ಲಿ ಅಪೂರ್ಣಗೊಂಡಿದೆ;
ಈ) ಅಪೂರ್ಣಗೊಂಡ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು;
ಉ) ಸದರಿ ಯೋಜನೆಗಳಲ್ಲಿ ಹೊಸದಾಗಿ ಗ್ರಾಮವನ್ನು ಆಯ್ಕೆ ಮಾಡಲು ಇರುವ ಮಾನದಂಡಗಳಾವುವು?

----

15/4/796

**ಅಕ್ರಮ ಮಧ್ಯ ಮಾರಾಟ**

**1034 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಿಎಲ್1, ಸಿ.ಎಲ್2, ಸಿಎಲ್4, ಸಿಎಲ್7 ಮತ್ತು ಸಿಎಲ್9 ಮತ್ತು ಎಂಎಸ್ಐಎಲ್ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿರುವ ಅಂಗಡಿಗಳೆಷ್ಟು; (ವಿವರ ನೀಡುವುದು)
ಆ) ಕಳೆದ 3 ವರ್ಷಗಳಲ್ಲಿ ಬೆಳಗಾವಿ ಜಿಲ್ಲೆ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ, ಬೇರೆ ಕಡೆಗಳಿಂದ ವರ್ಗಾವಣೆ ಹಾಗೂ ಎಂಎಸ್ಐಎಲ್ ನಿಂದ ಎಷ್ಟು ಮದ್ಯ ಮಾರಾಟ ಅಂಗಡಿಗಳನ್ನು ಆರಂಭಿಸಲಾಗಿದೆ; (ವಿವರ ನೀಡುವುದು)
ಇ) ಹೊಸದಾಗಿ ವರ್ಗಾವಣೆ ಮಾಡುವ ಮತ್ತು ಎಂಎಸ್ಐಎಲ್ ನಿಂದ ಮದ್ಯದಂಗಡಿ ಆರಂಭಿಸಲು ಇರುವ ಸರ್ಕಾರದ ನಿಯಮಗಳೇನು;
ಈ) ದೇವಸ್ಥಾನಗಳು, ಶಾಲಾ ಕಾಲೇಜುಗಳು, ಸಾರ್ವಜನಿಕ ಪ್ರಮುಖ ರಸ್ತೆಗಳು, ಸರ್ಕಾರಿ ಕಛೇರಿಗಳು, ಪಾರಂಪರಿಕ ಸ್ಮಾರಕಗಳು ಮತ್ತು ಬಸ್ ನಿಲ್ದಾಣದ ಪಕ್ಕ ನಿಯಮ ಮೀರಿ ಮದ್ಯದ ಅಂಗಡಿಗಳನ್ನು ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಾರ್ವಜನಿಕರಿಂದ ವಿರೋಧ ವಿರುವ ಅಂಗಡಿಗಳ ಸ್ಥಳಾಂತರಕ್ಕೆ ಕೈಗೊಳ್ಳುವ ಕ್ರಮವೇನು?

----

15/4/797

**ಸಣ್ಣ ಕೈಗಾರಿಕಾ ಇಲಾಖೆ ಯೋಜನೆಗಳು**

**1035 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಸಣ್ಣ ಕೈಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 2019-20ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆ ಇಲಾಖೆಯು ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ; (ವಿವರ ನೀಡುವುದು)
ಆ) 2018-19ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆ ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗೆ ಸಂಬಂಧಿಸಿದಂತೆ ಜಾರಿಗೊಳಿಸಲಾದ ಯೋಜನೆಗಳಾವುವು?

----

15/4/787

**ಮರಳಿನ ಅಭಾವ**

**1036** **ಗೂಳಿಹಟ್ಟಿ ಬಿ. ಶೇಖರ್ (ಹೊಸದುರ್ಗ):**

ಮಾನ್ಯ **ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಆಶ್ರಯ ಮನೆ, ದೇವಸ್ಥಾನ, ಎನ್,ಆರ್,ಇ,ಜಿ ಮುಂತಾದ ನಿರ್ಮಾಣಗಳಿಗೆ ಗ್ರಾಮೀಣ ಭಾಗದಲ್ಲಿ ಉಂಟಾಗಿರುವ ಮರಳಿನ ಅಭಾವ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಆ) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ವೇದಾವತಿ ನದಿಯಲ್ಲಿ ನಿಗದಿತ ಆಳ ಅಗಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮರಳು ತೆಗೆದಿರುವ, ಮರಳು ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಂಡಿದೆ; ಅಂತರ್ಜಲ ಬತ್ತಿ ಹೋಗಿರುವುದರಿಂದ ಮರಳು ಗುತ್ತಿಗೆ ನೀಡಿರುವುದನ್ನು ಸರ್ಕಾರ ರದ್ದುಪಡಿಸುವುದೇ?

----

**15/4/788**

**ಶಾಸಕರ ಪ್ರದೇಶಾಭಿವೃದ್ಧಿ ನಿಧಿ**

**1037** **ಗೂಳಿಹಟ್ಟಿ ಬಿ. ಶೇಖರ್ (ಹೊಸದುರ್ಗ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಿಂದ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ಬಿಡುಗಡೆಯಾದ ಮೊತ್ತ ಎಷ್ಟು; ಇದುವರೆಗೆ ರಾಜ್ಯದ ಜಿಲ್ಲಾಧಿಕಾರಿಗಳ ಪಿಡಿ ಅಕೌಂಟ್‌ನಲ್ಲಿ ಇರುವ ಹಣ ಎಷ್ಟು; ಖರ್ಚಾಗದೆ ಉಳಿಯಲು ಕಾರಣವೇನು; (ಜಿಲ್ಲಾವಾರು ವಿವರ ಒದಗಿಸುವುದು)

ಆ) ಈ ಅನುದಾನ ಖರ್ಚಾಗಲು ಈಗಿರುವ ನಿಯಮಗಳನ್ನು ಸರಳೀಕರಿಸಲಾಗುವುದೇ; ಜಿಲ್ಲಾಧಿಕಾರಿಗಳ ಕಾರ್ಯ ಒತ್ತಡದ ಬದಲಾಗಿ ಬೇರೆ ಇಲಾಖೆಗೆ ಈ ಶಾಸಕರ ನಿಧಿ ನಿರ್ವಹಣೆಯನ್ನು ವಹಿಸಲಾಗುವುದೇ;

ಇ) ಕಳೆದ 3 ವರ್ಷಗಳಿಂದ ರಾಜ್ಯದ ವಿವಿಧ ಮಂಡಳಿ/ಪ್ರಾಧಿಕಾರಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ; ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಇದುವರೆವಿಗೂ ಎಷ್ಟು ಹಣ ಬಿಡುಗಡೆಯಾಗಿದೆ; ಎಷ್ಟು ಖರ್ಚಾಗಿದೆ; ಇದರಲ್ಲಿ ಎಷ್ಟು ತಾಲ್ಲೂಕು ಸೇರುತ್ತದೆ; ಅನುದಾನ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

----

**15/4/807**

**ಗಣಿಗಾರಿಕೆಯಿಂದ ಅಂತರ್ಜಲ ಕುಸಿತ**

**1038** **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಗಣಿಗಾರಿಕೆಯಿಂದ ಅಂತರ್ಜಲ ಕುಸಿತವಾಗಿರುವುದು ಹಾಗೂ ಕುಡಿಯುವ ನೀರು ಮಲಿನವಾಗಿರುವ ಘಟನೆಗಳು ನಡೆದಿವೆಯೇ;

ಆ) ಯಾವ ಗಣಿಗಾರಿಕೆಯಿಂದ ಕುಡಿಯುವ ನೀರು ಮಲಿನವಾಗಿರುತ್ತದೆ; ಇದರ ತಡೆಗೆ ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಗಣಿಗಾರಿಕೆಯ ಕಲ್ಲುಕ್ವಾರಿಗಳ ನೀರು ಸಂಗ್ರಹದಿಂದ ಪರಿಸರದ ಮೇಲೆ ಪರಿಣಾಮ ಉಂಟಾಗುತ್ತಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಹಾಗಿದ್ದಲ್ಲಿ ಎಷ್ಟು ಕಲ್ಲುಗಣಿಗಾರಿಕೆ ಹೊಂಡಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)
ಉ) ಇದನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

----

15/4/1022

**ಮತೀಯ ಸಂಘಟನೆಗಳ ನಿಗ್ರಹ**

**1039 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಕರಾವಳಿಯಲ್ಲಿ ಆತ್ಮಾಹುತಿ ದಳ ಹಾಗೂ ಮತೀಯವಾದಿ ಸಂಘಟನೆಗಳು ಹಿಂದೂ ನಾಯಕರ ಹತ್ಯೆ ಮಾಡಲು ನಿರ್ಧರಿಸಿರುವ ಮಾಹಿತಿಯು ಗುಪ್ತಚರ ಇಲಾಖೆಗೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಹಿಂದೂ ನಾಯಕರ ರಕ್ಷಣೆ ಹಾಗೂ ಭಯೋತ್ಪಾದಕ ಮತೀಯವಾದಿ ಸಂಘಟನೆಯ ನಿಗ್ರಹ ಹಾಗೂ ಬಂಧನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

----

15/4/1347

**ಕೈಗಾರಿಕೆಗಳ ವಿವರ**

**1040 ಬಿ. ಹರ್ಷವರ್ಧನ್ (ನಂಜನಗೂಡು):**

ಮಾನ್ಯ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು ಇವೆ; ಈ ಕೈಗಾರಿಕೆಗಳು ಉತ್ಪಾದಿಸುತ್ತಿರುವ ಉತ್ಪಾದನೆಗಳಾವುವು;( ವಿವರ ಒದಗಿಸುವುದು)
ಆ) ಸದರಿ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆಯೇ;( ವಿವರ ನೀಡುವುದು)
ಇ) ಈ ಕೈಗಾರಿಕೆಗಳು ಸಿ.ಎಸ್.ಆರ್ ಫಂಡ್‌ನಲ್ಲಿ ನೀಡಿರುವ ಮೊತ್ತವೆಷ್ಟು; ಯಾವ ಯಾವ ಉದ್ದೇಶಗಳಿಗೆ ನೀಡಲಾಗಿರುತ್ತದೆ; ಯಾವ ಯಾವ ಕಡೆ ನೀಡಲಾಗಿದೆ; ವಿಧಾನಸಭಾ ಕ್ಷೇತ್ರಕ್ಕೆ ಸೀಮಿತಗೊಳಿಸಲು ಯಾವುದಾದರೂ ನಿಯಮವನ್ನು ರಚಿಸಲಾಗಿದೆಯೇ;
ಈ) ಈ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ಗ್ರಾಮ ಪಂಚಾಯಿತಿ/ ನಗರಸಭೆಗೆ ತೆರಿಗೆ ಪಾವತಿಸಿದೆಯೇ; ಪಾವತಿಸಿದ್ದಲ್ಲಿ ಎಷ್ಟು ತೆರಿಗೆ ಪಾವತಿಸಲಾಗಿದೆ; ತೆರಿಗೆ ಬಾಕಿ ಉಳಿಸಿಕೊಂಡಿರುವ ಕೈಗಾರಿಕೆಗಳು ಎಷ್ಟು;( ವಿವರ ನೀಡುವುದು)
ಉ) ಸದರಿ ಕ್ಷೇತ್ರದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರವು ಹೊಂದಿದೆಯೇ; ಯಾವುದಾದರೂ ಖಾಸಗಿ ಸಂಸ್ಥೆಗಳು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದಿವೆಯೇ?( ಬಂದಿದ್ದಲ್ಲಿ ಅದರವಿವರಗಳನ್ನು ನೀಡುವುದು)

----

15/4/1348

## ಸಣ್ಣ ಕೈಗಾರಿಕೆಗಳ ವಿವರ

**1041 ಬಿ. ಹರ್ಷವರ್ಧನ್ (ನಂಜನಗೂಡು):**

ಮಾನ್ಯ **ಸಣ್ಣ ಕೈಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ಇವೆ; ಈ ಕೈಗಾರಿಕೆಗಳ ಉತ್ಪಾದನೆಗಳಾವುವು;( ವಿವರ ನೀಡುವುದು)
ಆ) ಈ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆಯೇ;( ವಿವರವನ್ನು ನೀಡುವುದು)
ಇ) ಈ ಸಣ್ಣ ಕೈಗಾರಿಕೆಗಳು ಸಿ.ಎಸ್.ಆರ್ ಫಂಡ್‌ನಲ್ಲಿ ನೀಡಿರುವ ಮೊತ್ತವೆಷ್ಟು; ಯಾವ ಯಾವ ಉದ್ದೇಶಗಳಿಗೆ ನೀಡಲಾಗಿರುತ್ತದೆ; ಯಾವ ಯಾವ ಕಡೆ ನೀಡಲಾಗಿದೆ; ವಿಧಾನ ಸಭಾ ಕ್ಷೇತ್ರಕ್ಕೆ ಸೀಮಿತಗೊಳಿಸಲು ಯಾವುದಾದರೂ ನಿಯಮವನ್ನು ರಚಿಸಲಾಗಿದೆಯೇ;
ಈ) ಈ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ಗ್ರಾಮ ಪಂಚಾಯಿತಿ/ ನಗರಸಭೆಗೆ ತೆರಿಗೆ ಪಾವತಿಸಿವೆಯೇ; ಪಾವತಿಸಿದ್ದಲ್ಲಿ ಎಷ್ಟು ತೆರಿಗೆ ಪಾವತಿಸಲಾಗಿದೆ; ತೆರಿಗೆ ಬಾಕಿ ಉಳಿಸಿಕೊಂಡಿರುವ ಕೈಗಾರಿಕೆಗಳು ಎಷ್ಟು;( ವಿವರ ನೀಡುವುದು)
ಉ) ಈ ಕ್ಷೇತ್ರದಲ್ಲಿ ಹೊಸ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸವ ಉದ್ದೇಶವನ್ನು ಸರ್ಕಾರವು ಹೊಂದಿದೆಯೇ; ಖಾಸಗಿ ಸಂಸ್ಥೆಗಳು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದಿದೆಯೇ?( ಬಂದಿದ್ದಲ್ಲಿ ಅದರ ವಿವರಗಳನ್ನು ನೀಡುವುದು)

----

**15/4/1201**

## ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

**1042 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಉದ್ಯೋಗ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)
ಆ) ಅರ್ಹತೆಗೆ ಇರುವ ಮಾನದಂಡಗಳೇನು; (ಮಾಹಿತಿ ನೀಡುವುದು)
ಇ) ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಿಂದ ಉದ್ಯೋಗಾವಕಾಶಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

----

**15/4/1202**

## ಗ್ರಾಮ ಜ್ಯೋತಿಯೋಜನೆ

**1043 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೇಂದ್ರ ಸರ್ಕಾರದ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರದ ಪಾತ್ರವೇನು;

ಆ) ಈ ಯೋಜನೆಯ ಮಾನದಂಡಗಳೇನು; ಇದರ ಫಲಾನುಭವಿಗಳು ಯಾರು; (ವಿವರ ನೀಡುವುದು)
ಇ) ಸದರಿ ಯೋಜನೆಯನ್ನು ಪೂರ್ಣಗೊಳಿಸದೇ ಇರುವುದರಿಂದ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

----

15/4/1203

**ಅಕ್ರಮ ಪಂಪ್‌ಸೆಟ್‌ಗಳ ಸಕ್ರಮ**

**1044 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ರೈತರು ಕೃಷಿ ಚಟುವಟಿಕೆಗಳಿಗೆ ಬಳಸುತ್ತಿರುವ ಪಂಪ್‌ಸೆಟ್‌ಗಳಿಗೆ ಅಕ್ರಮವಾಗಿ ವಿದ್ಯುತ್‌ನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಎಲ್ಲಾ ರೈತರುಗಳಿಗೆ ಅನುಕೂಲವಾಗುವಂತೆ ಯಾವಾಗ ಸಕ್ರಮಗೊಳಿಸಲಾಗುವುದು; ಸಕ್ರಮಗೊಳಿಸಲು ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; (ನಿಪ್ಪಾಣಿ ಮತಕ್ಷೇತ್ರದ ಮಾಹಿತಿ ನೀಡುವುದು)
ಇ) ಸಕ್ರಮಗೊಳಿಸಲು ಇರುವ ಮಾನದಂಡಗಳೇನು?

----

15/4/366

**ಹೆಜಮಾಡಿ ಬಂದರಿಗೆ ಭೂಮಿ**

**1045 ಲಾಲಾಜಿ ಆರ್. ಮೆಂಡನ್ (ಕಾಪು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದ ಹೆಜಮಾಡಿ ಬಂದರಿಗೆ ಬೇಕಾಗಿರುವ ಹೆಚ್ಚುವರಿ ಭೂಮಿಯನ್ನು ಯಾವಾಗ ಸ್ವಾಧೀನ ಪಡಿಸಿಕೊಳ್ಳಲಾಗುವುದು;
ಆ)ಈ ಬಂದರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಶೇಕಡಾ 50ರ ಅನುಪಾತ ನಿಗದಿಯಾಗಿದ್ದು ಕೇಂದ್ರ ಸರ್ಕಾರದಿಂದ ಮೊದಲ ಕಂತಿನ ಹಣ ಬಿಡುಗಡೆಯಾಗಿದ್ದು ರಾಜ್ಯ ಸರ್ಕಾರದಿಂದ ಮೊದಲ ಕಂತಿನ ಹಣ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು:
ಇ) ಹೆಜಮಾಡಿ ಮೀನುಗಾರಿಕೆ ಬಂದರಿಗಾಗಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದೆಯೇ? (ಪೂರ್ಣ ವಿವರ ನೀಡುವುದು)

----

15/4/1415

**ವಿದ್ಯುತ್ ಉಪ ಕೇಂದ್ರ ಸ್ಥಾಪನೆ**

**1046 ಕೆ. ಮಹದೇವ (ಪಿರಿಯಾಪಟ್ಟಣ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪಿರಿಯಾಪಟ್ಟಣ ಮತಕ್ಷೇತ್ರ ವ್ಯಾಪ್ತಿಯ ರೈತರು ಹೆಚ್ಚಾಗಿ ವಿದ್ಯುತ್ ಕೊಳವೆ ಬಾವಿಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕ್ಷೇತ್ರ ವ್ಯಾಪ್ತಿಯ ಮಾಲಂಗಿ, ಕಂಪಲಾಪುರ, ಚೌತಿ ಪಂಚವಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ರೈತರ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ;

ಇ) ಸದರಿ ಕ್ಷೇತ್ರದ ವ್ಯಾಪ್ತಿಯ ಪಂಚವಳ್ಳಿ ಗ್ರಾಮದಲ್ಲಿ 66/11 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

----

15/4/1416

### ನೂತನ ವೃತ್ತ ಕಛೇರಿ ಸ್ಥಾಪನೆ

**1047 ಕೆ. ಮಹದೇವ (ಪಿರಿಯಾಪಟ್ಟಣ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪಿರಿಯಾಪಟ್ಟಣ ಕ್ಷೇತ್ರ ವ್ಯಾಪ್ತಿಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ನೂತನ ವೃತ್ತ ಕಛೇರಿಯನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಈ ವೃತ್ತ ಕಛೇರಿಯನ್ನು ಸ್ಥಾಪನೆ ಮಾಡಿದರೆ ಅಕ್ಕಪಕ್ಕದ ತಾಲ್ಲೂಕು ಕೇಂದ್ರಗಳಿಗೆ ಅನುಕೂಲವಾಗುವುದಿಲ್ಲವೇ;

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

----

15/4/1417

### ಆಯವ್ಯಯ ಅಂದಾಜು

**1048 ಕೆ. ಮಹದೇವ (ಪಿರಿಯಾಪಟ್ಟಣ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 201819 ನೇ ಸಾಲಿನ ರಾಜ್ಯದ ಆಯವ್ಯಯ ಅಂದಾಜು ಗಾತ್ರ ಎಷ್ಟು;

ಆ) 201819 ನೇ ಸಾಲಿನ ಅಂದಾಜಿನ ಮೊತ್ತದ ಪಾವತಿಗಳು ಎಷ್ಟು; ಈ ಸಾಲಿನಲ್ಲಿ ಖರ್ಚು ಎಷ್ಟು ಆಗಿದೆ (ಆಯವ್ಯಯದ ಅಂದಾಜು ಮಾಡಿದ ಮೊತ್ತಕ್ಕಿಂತ ಎಷ್ಟು ಖರ್ಚಾಗಿದೆ ವಿವರ ನೀಡುವುದು)

ಇ) 201819 ನೇ ಸಾಲಿನ ಆಯವ್ಯಯದಲ್ಲಿ ಅಂದಾಜು ಮಾಡಿದ ಮೊತ್ತಕ್ಕಿಂತ ಎಷ್ಟು ಹೆಚ್ಚು ತೆರಿಗೆ ಪಾವತಿ ಯಾಗಿದೆ; ಅಥವಾ ಕಡಿಮೆ ತೆರಿಗೆ ಪಾವತಿ ಯಾಗಿದೆಯೇ; (ತೆರಿಗೆ ವಿಧಗಳ ಬಗ್ಗೆ ವಿವರಣೆ ನೀಡುವುದು)

ಈ) ಆಯವ್ಯಯದ ಅಂದಾಜಿಗಿಂತ ಕಡಿಮೆ ತೆರಿಗೆ ಪಾವತಿಯಾಗಲು ಕಾರಣವೇನು;

ಉ) ತೆರಿಗೆ ವಸೂಲಿಗೆ ಸರ್ಕಾರ ಸೂಕ್ತ ಕ್ರಮಕೈಗೊಳ್ಳುವುದೇ?

----

15/4/1204

### ರಾಜ್ಯ ಸರ್ಕಾರಿ ನೌಕರರಿಗೆ ಬಡ್ತಿ

**1049 ಎನ್. ಮಹೇಶ್ (ಕೊಳ್ಳೇಗಾಲ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯ ಸರ್ಕಾರಿ ನೌಕರರಿಗೆ ಗ್ರೂಪ್‌ಸಿ ಮತ್ತು ಗ್ರೂಪ್‌ಬಿ ಹುದ್ದೆಗಳಿಗೆ ಬಡ್ತಿ ನೀಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರುಗಳನ್ನು ಪರಿಗಣಿಸಲಾಗುತ್ತಿದೆಯೇ;
ಆ) ಎರಡು ಬಡ್ತಿಯ ಪ್ರಕ್ರಿಯೆಯ ನಡುವೆ ಹುದ್ದೆಗಳ ಹಂಚಿಕೆಯಾದಾಗ ರೋಸ್ಟರ್‌ನ್ನು ಪಾಲಿಸಲು ಇರುವ ನಿಯಮಗಳೇನು; ಹಿಂದಿನ ಬಡ್ತಿಯಲ್ಲಿ ರೋಸ್ಟರ್ ಬಿಂದು ದೊರೆಯದಷ್ಟು ಕಡಿಮೆ ಹುದ್ದೆಗಳಿದ್ದಾಗ ನಂತರದ ಬಡ್ತಿ ಪ್ರಕ್ರಿಯೆಯ ಹುದ್ದೆಗಳನ್ನೂ ಸೇರಿಸಿ (ನಿರಂತರ Continuous ಎಂದು ಪರಿಗಣಿಸಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರುಗಳನ್ನು ಬಡ್ತಿಗೆ ಪರಿಗಣಿಸಲಾಗುತ್ತಿದೆಯೇ;
ಇ) ರೋಸ್ಟರ್ ನೀಡಲು ಸಾಧ್ಯವಾಗದಷ್ಟು ಹುದ್ದೆಗಳನ್ನು ಪ್ರತ್ಯೇಕವಾಗಿಸಿ ಬಡ್ತಿ ನೀಡುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರುಗಳನ್ನು ಬಡ್ತಿಗೆ ಪರಿಗಣಿಸದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ನೇಮಕಾತಿ/ ಬಡ್ತಿ ಪ್ರಾಧಿಕಾರಗಳಿಗೆ ಸೂಕ್ತ ಆದೇಶ ನೀಡಲಾಗಿದೆಯೇ;
ಈ) ಬಡ್ತಿ ಮೀಸಲಾತಿ ಪ್ರಕರಣದಿಂದ ಹಿಂಬಡ್ತಿ ಪಡೆದ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ಪಂಗಡದ ನೌಕರರುಗಳನ್ನು ಸರ್ಕಾರದ ಬಡ್ತಿ ಮೀಸಲಾತಿ ಕಾಯ್ದೆಯಂತೆ ಮತ್ತೆ ಅದೇ ಹುದ್ದೆಗೆ ನೇಮಿಸಲಾಗಿದೆಯೇ; ಇಲ್ಲವಾದಲ್ಲಿ ಯಾವ ಕಾಲಮಿತಿಯೊಳಗೆ ಸದರಿ ಅಧಿಕಾರಿಗಳಿಗೆ ಅದೇ ಹುದ್ದೆಗೆ ಮರು ನಿಯೋಜಿಸಲಾಗುವುದು;
ಉ) ರಾಜ್ಯ ಸರ್ಕಾರದ ವಿವಿಧ ಇಲಾಖೆ/ ನಿಗಮ/ ಮಂಡಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಸಂಖ್ಯೆ ಎಷ್ಟು? (ಇಲಾಖಾವಾರು, ಹುದ್ದೆವಾರು, ಕೇಡರ್‌ವಾರು, ಜಾತಿ/ ಪ್ರವರ್ಗವಾರು, ವಿಳಾಸ ಮತ್ತು ಮೊಬೈಲ್ ಸಂಖ್ಯೆ ಸಹಿತ ಮಾಹಿತಿ ನೀಡುವುದು)

----

**15/4/1349**

## ಖಾಲಿ ಇರುವ ಹುದ್ದೆಗಳು

**1050 ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ತುರುವೇಕೆರೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಎಲ್ಲಾ ಇಲಾಖೆಗಳಲ್ಲಿ ಮಂಜೂರಾದ ಅಧಿಕಾರಿ ಮತ್ತು ನೌಕರರುಗಳ ಹುದ್ದೆಗಳು ಎಷ್ಟು;(ಖಾಲಿ ಹುದ್ದೆಗಳು, ಹಾಲಿ ಭರ್ತಿ ಇರುವ ಎಲ್ಲಾ ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು)
ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅರೆಕಾಲಿಕ, ಅರೆ ಸರ್ಕಾರಿ, ಗುತ್ತಿಗೆ ಆಧಾರಿತ ಮತ್ತು ದಿನಗೂಲಿ ನೌಕರರ ಮಂಜೂರಾದ ಹುದ್ದೆಗಳು ಎಷ್ಟು; ( ಖಾಲಿ ಹುದ್ದೆಗಳು, ಹಾಲಿ ಭರ್ತಿ ಇರುವ ಸಂಪೂರ್ಣ ಮಾಹಿತಿ ನೀಡುವುದು)
ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

**15/4/1418**

## ಶಿಸ್ತು ಕ್ರಮ

**1051 ರಾಜ್‌ಕುಮಾರ್ ಪಾಟೀಲ್ (ಸೇಡಂ ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 2017 ರಲ್ಲಿ ಕೋಲಾರದ ಅಬಕಾರಿ ಇಲಾಖೆಯ ಉಪ ಅಧೀಕ್ಷಕರು ಸತತ 3 ತಿಂಗಳಿಗೂ ಹೆಚ್ಚು ಅನಧಿಕೃತ ಗೈರು ಹಾಜರಾಗಿರುವ ಕುರಿತು ಮಾಧ್ಯಮಗಳಲ್ಲಿ ದಾಖಲೆಗಳ ಸಹಿತ ವರದಿಯಾದನಂತರ, ಸಂಬಂಧಪಟ್ಟ ಉಪ ಆಯುಕ್ತರು ಈ ಪ್ರಕರಣದಲ್ಲಿ ಶಿಸ್ತು ಕ್ರಮದಿಂದ ಪಾರಾಗಲು 3 ತಿಂಗಳ ಬದಲಾಗಿ ಕೇವಲ 09 ದಿನಗಳಿಗೆ ಮಾತ್ರ ತಪ್ಪು ದೋಷಾರೋಪಣ ಪಟ್ಟಿ ತಯಾರಿಸಿ ಅಬಕಾರಿ ಆಯುಕ್ತರಿಗೆ ಸಲ್ಲಿಸುವುದರೊಂದಿಗೆ ಗೈರು ಹಾಜರಾತಿ ಬಗ್ಗೆ ಸದರಿ ಅಧಿಕಾರಿಯವರಿಗೆ ನ್ಯಾಯಾಲಯದಲ್ಲಿ ಅನುಕೂಲಕರವಾಗಿ ಆದೇಶ ಪಡೆಯಲು ಅವಕಾಶ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಕಾನೂನು ಪದಕೋಶದವರು ವಿಚಾರಣೆಯನ್ನು ನಡೆಸುವ ಕುರಿತು ನೀಡಿರುವ ಕೆಲವು ಅಭಿಪ್ರಾಯವನ್ನು ಸಹ ಪಾಲನೆ ಮಾಡುವ ಬಗ್ಗೆ ಹಾಗೂ ನ್ಯಾಯಾಲಯದ ಆದೇಶ ವಿರುದ್ಧ ಮೇಲ್ಮನವಿ ಸಲ್ಲಿಸಲು ಆರ್ಥಿಕ ಇಲಾಖೆಯವರು ಮೊದಲು ಅನುಮತಿ ನೀಡಿ ತದನಂತರ, ಸರ್ಕಾರದ ಗಮನಕ್ಕೂ ತಾರದೆ ತರಾತುರಿಯಲ್ಲಿ ಅನುಮತಿ ಹಿಂಪಡೆದಿದ್ದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಈ ರೀತಿ3 ತಿಂಗಳಿಗೂ ಹೆಚ್ಚು ಅನಧಿಕೃತ ಗೈರು ಹಾಜರಾಗಿರುವ ಹಾಗೂ ಇದಕ್ಕೆ ಸಹಕಾರ ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೂಡಲೆ ಯಾವ ಕ್ರಮ ಕೈಗೊಳ್ಳುವುದು?

----

15/4/802

## ಮಿನಿ ವಿಮಾನ ನಿಲ್ದಾಣ ಸ್ಥಾಪನೆ

**1052 ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿಕ್ಕಮಗಳೂರು ನಗರದಲ್ಲಿ ಮಿನಿ ವಿಮಾನ ನಿಲ್ದಾಣ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ; ಇದ್ದಲ್ಲಿ ಯಾವ ಯೋಜನೆಯಡಿಯಲ್ಲಿ ನಿರ್ಮಿಸಲಾಗಿತ್ತದೆ;

ಆ) ಈ ವಿಮಾನ ನಿಲ್ದಾಣವನ್ನು ನಿರ್ಮಿಸಲು ಎಲ್ಲಿ ಹಾಗೂ ಎಷ್ಟು ಜಾಗ ಗುರುತಿಸಿ ಮಂಜೂರು ಮಾಡಲಾಗಿದೆ;

ಇ) ವಿಮಾನ ನಿಲ್ದಾಣ ನಿರ್ಮಿಸಲು ನಿಗಧಿಪಡಿಸಿರುವ ಅನುದಾನವೆಷ್ಟು;

ಈ) ವಿಮಾನ ನಿಲ್ದಾಣ ಕಾಮಗಾರಿ ಟೆಂಡರ್ ಪ್ರಕ್ರಿಯೆ ಮುಗಿದಿದೆಯೆ;

ಉ) ವಿಮಾನ ನಿಲ್ದಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?( ವಿವರ ನೀಡುವುದು)

----

15/4/803

## ಜಿಂದಾಲ್ ಕಾರ್ಖಾನೆ ಪ್ರಾರಂಭ

**1053 ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಜಿಂದಾಲ್ ಕಾರ್ಖಾನೆ ಪ್ರಾರಂಭವಾಗಿದ್ದು ಯಾವಾಗ;

ಆ) ಜಿಂದಾಲ್ ಸಂಸ್ಥೆಗೆ ಕೈಗಾರಿಕೆ ಸ್ಥಾಪನೆ ಮಾಡಲು ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ;

ಇ) ಈ ಕೈಗಾರಿಕೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಕರ್ನಾಟಕ ಸರ್ಕಾರ ಹಾಗೂ ಜಿಂದಾಲ್ ಸಂಸ್ಥೆಯ ನಡುವೆ ಆಗಿರುವ ಒಪ್ಪಂದ (ಎಂ.ಓ.ಯು) ವೇನು;
ಈ) ಜಿಂದಾಲ್ ಸಂಸ್ಥೆಯವರು ಎಂ.ಓ.ಯು ನಲ್ಲಿರುವ ಷರತ್ತುಗಳನ್ನು ಪಾಲಿಸಿದ್ದಾರೆಯೆ;
ಉ) ಜಿಂದಾಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು; ಇವರಲ್ಲಿ ಖಾಯಂ ಹಾಗೂ ತಾತ್ಕಾಲಿಕ ಉದ್ಯೋಗಿಗಳೆಷ್ಟು; ( ವೃಂದವಾರು ಮಾಹಿತಿ ಒದಗಿಸುವುದು)
ಊ) ಈ ಪೈಕಿ ಎಷ್ಟು ಜನ ಸ್ಥಳೀಯರಿಗೆ ಉದ್ಯೋಗ ಒದಗಿಸಲಾಗಿದೆ?(ಸಂಪೂರ್ಣ ವಿವರ ಒದಗಿಸುವುದು)

----

15/4/801

**ಮೈಶುಗರ್ ಕಂಪನಿ**

**1054 ವಿ. ಸೋಮಣ್ಣ (ಗೋವಿಂದರಾಜನಗರ):**

ಮಾನ್ಯ **ಸಕ್ಕರೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮಂಡ್ಯದ ಮೈಶುಗರ್ ಕಂಪನಿಯ ಜಾಗವನ್ನು ಯಾವುದಾದರೂ ಖಾಸಗಿ ಟ್ರಸ್ಟ್ ಅಥವಾ ವ್ಯಕ್ತಿಗಳ ಹೆಸರಿಗೆ ಲೀಸ್ ಅಥವಾ ಪರಭಾರೆ ನೋಂದಣಿ ಮಾಡಲಾಗಿದೆಯೇ;
ಆ) ಹಾಗಿದ್ದಲ್ಲಿ ಯಾರಿಗೆ ಲೀಸ್ ಅಥವಾ ಪರಭಾರೆ ನೋಂದಣೆ ಮಾಡಲಾಗಿದೆ; ಯಾವ ಷರತ್ತುಗಳನ್ನು ವಿಧಿಸಲಾಗಿದೆ?( ಸಂಪೂರ್ಣ ಮಾಹಿತಿ ಒದಗಿಸುವುದು)

----

15/4/790

**ಸಕ್ಕರೆ ಕಾರ್ಖಾನೆಗಳ ಪರವಾನಗಿ**

**1055 ಬಿ ಶ್ರೀರಾಮುಲು (ಮೊಳಕಾಲ್ಮೂರು):**

ಮಾನ್ಯ **ಸಕ್ಕರೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಪರವಾನಿಗೆ ನೀಡಲಾಗಿದೆ; ಅವುಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು)
ಆ) ರಾಜ್ಯದಲ್ಲಿ ಪರವಾನಿಗೆ ನವೀಕರಿಸದೆ ಎಷ್ಟು ಸಕ್ಕರೆ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ; (ಮಾಹಿತಿ ಒದಗಿಸುವುದು)
ಇ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಸೆಕ್ಷನ್109 ಕರ್ನಾಟಕ ಭೂಸುಧಾರಣೆ ಆಕ್ಟ್ ಅನ್ವಯ ಅನುಮತಿ ನೀಡಲಾಗಿದೆ;
ಈ) ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಸಕ್ಕರೆ ಕಾರ್ಖಾನೆಗಳ ಮೇಲೆ ಸೆಕ್ಷನ್109ರ ನಡವಳಿಗಳ ಮೂಲಕ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು)

----

15/4/791

**ಸಣ್ಣ ಕೈಗಾರಿಕೆಗಳ ಅಭಿವೃದ್ಧಿ**

**1056 ಬಿ ಶ್ರೀರಾಮುಲು (ಮೊಳಕಾಲ್ಮೂರು):**

ಮಾನ್ಯ **ಸಣ್ಣ ಕೈಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಸಣ್ಣ ಕೈಗಾರಿಕೆ ಇಲಾಖೆಗೆ ಬಿಡುಗಡೆಯಾದ ಅನುದಾನವೆಷ್ಟು; (ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವಿವರ ನೀಡುವುದು)
ಆ) ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಅನೇಕ ಸಣ್ಣ ಕೈಗಾರಿಕೆಗಳು ಮುಚ್ಚಿರುವುದರಿಂದ ಇಲ್ಲಿನ ಜನರು ಉದ್ಯೋಗಾವಕಾಶ ವಂಚಿತರಾಗಿದ್ದು, ಇವುಗಳನ್ನು ಪುನಃಚೇತನಗೊಳಿಸಲು ಸರ್ಕಾರವು ಇದುವರೆಗೂ ಕೈಗೊಂಡಿರುವ ಕ್ರಮಗಳೇನು;
ಇ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಯಾವ್ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ;
ಈ) ಕೆ.ಐ.ಎ.ಡಿ.ಬಿ.ಯಿಂದ ಕೈಗಾರಿಕೆ ಸ್ಥಾಪನೆ ಮಾಡಲು ಇರುವ ನಿಯಮಗಳೇನು ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಹಾಲಿ ಲಭ್ಯವಿರುವ ಭೂಮಿಯ ಸಂಪೂರ್ಣ ವಿವರ ನೀಡುವುದು?

----

**15/4/789**

**ಟಕಾಂಪಿಟ್ ವಿತ್ ಚೈನಾ ಕ್ಲಸ್ಟರ್ ಯೋಜನೆ**

**1057 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಸಣ್ಣ ಕೈಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) "ಕಾಂಪಿಟ್‌ವಿತ್ ಚೈನಾ" ಕ್ಲಸ್ಟರ್ ಯೋಜನೆಯ ಸವಿವರ ಮಾಹಿತಿಯನ್ನು ಒದಗಿಸುವುದು ಹಾಗೂ ಈ ಕಾರ್ಯಕ್ರಮದಡಿ ಸಾಧಿಸಿರುವ ಪ್ರಗತಿ ಏನು; (ವಿವರಗಳನ್ನು ಒದಗಿಸುವುದು)
ಆ) ರಾಜ್ಯಾದ್ಯಂತ ನೂತನ ಕೈಗಾರಿಕಾ ವಲಯಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆಯೇ; ಪ್ರಸಕ್ತ ಸಾಲಿನಲ್ಲಿ ಗುರುತಿಸಿರುವ ಕೈಗಾರಿಕಾ ವಲಯಗಳ ಮಾಹಿತಿಯನ್ನು ಒದಗಿಸುವುದು;
ಇ) ರಾಜ್ಯದಲ್ಲಿ ಸಣ್ಣ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವ ಯೋಜನೆಗಳು ಯಾವುವು; ಇಂತಹ ಯೋಜನೆಗಳಡಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು? ಕಳೆದ ಮೂರು ವರ್ಷಗಳ ಮಾಹಿತಿಯನ್ನು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಪಟ್ಟಿಯೊಂದಿಗೆ ಒದಗಿಸುವುದು

----

**15/4/1410**

**ಕರಾವಳಿ ಅಭಿವೃದ್ಧಿ ಪ್ರಾಧಿಕಾರ**

**1058 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಿಂದ ಇದುವರೆಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು;( ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)
ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು;( ಸಂಪೂರ್ಣ ವಿವರ ಒದಗಿಸುವುದು)
ಇ) ಈ ಅವಧಿಯಲ್ಲಿ ಸರ್ಕಾರದಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ( ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

----

15/4/1411

## ಮಲೆನಾಡು ಅಭಿವೃದ್ಧಿ ಮಂಡಳಿ

**1059 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಮಲೆನಾಡು ಅಭಿವೃದ್ಧಿ ನಿಗಮದಿಂದ ಬಿಡುಗಡೆಯಾದ ಅನುದಾನವೆಷ್ಟು;( ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)

ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು;( ಸಂಪೂರ್ಣ ವಿವರ ಒದಗಿಸುವುದು)

ಇ) ಈ ಅವಧಿಯಲ್ಲಿ ಸರ್ಕಾರ ಮಲೆನಾಡು ಅಭಿವೃದ್ಧಿ ಮಂಡಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?( ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

----

15/4/1363

## ಮಂಜೂರಾದ ಹುದ್ದೆಗಳು

**1060 ಸುನಿಲ್ ಬಿಳಿಯ ನಾಯಕ್ (ಭಟ್ಕಳ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ಸಂಸ್ಥೆಗೆ ಮಂಜೂರಾದ ಹುದ್ದೆಗಳು ಎಷ್ಟು; ಪ್ರಸ್ತುತ ಎಷ್ಟು ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ; (ವೃಂದವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ಮೈಸೂರು ಸೇಲ್ಸ್ಇಂಟರ್ ನ್ಯಾಷನಲ್ ಲಿಮಿಟೆಡ್ ಸಂಸ್ಥೆ ಯಾವಾಗ ಆರಂಭಗೊಂಡಿದೆ; ಇದರ ಕಾರ್ಯವ್ಯಾಪ್ತಿಗಳೇನು;

ಇ) ಸದರಿ ಸಂಸ್ಥೆಯಲ್ಲಿ ಎಷ್ಟು ಮಂದಿ ಗುತ್ತಿಗೆ ಆಧಾರದಲ್ಲಿ ಹಾಗೂ ನಿವೃತ್ತಿ ನಂತರ ಮರು ನೇಮಕಾತಿಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ವೃಂದವಾರು/ವೇತನವಾರು ಸಂಪೂರ್ಣ ಮಾಹಿತಿ ಒದಗಿಸುವುದು)

ಈ) ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ನೀಡುವ ಭದ್ರತೆಗಳೇನು; ಇವರುಗಳನ್ನು ಖಾಯಂಗೊಳಿಸುವಲ್ಲಿ ಸರ್ಕಾರದ ನಿಲುವೇನು;

ಉ) ಈ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ಖಾಲಿ ಇರುವ ಹುದ್ದೆಗಳ ವೃಂದವಾರು ವಿವರಗಳನ್ನು ಒದಗಿಸುವುದು)

----

15/4/1365

## ಮರಳಿನ ಕೊರತೆ

**1061 ಸುನಿಲ್ ಬಿಳಿಯ ನಾಯಕ್ (ಭಟ್ಕಳ):**

ಮಾನ್ಯ **ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು** ಈ ವಿಷಯಗಳನ್ನು ದಯವಿಟ್ಟು

ತಿಳಿಸುವರೆ : -

ಅ) ಉಡುಪಿ ಜಿಲ್ಲೆಯಲ್ಲಿನ ಮರಳಿನ ಕೊರತೆಯನ್ನು ಪರಿಹರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;
ಆ) ಕರಾವಳಿ ನಿಯಂತ್ರಣ ಹೊರತುಪಡಿಸಿದ ವಲಯ (Non CRZ) ದಲ್ಲಿ ಮರಳು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ; ಎಷ್ಟು ಕಡೆ ಸ್ಥಳ ಗುರುತಿಸಲಾಗಿದೆ; (ಉಡುಪಿ ಜಿಲ್ಲೆಯ ಸಂಪೂರ್ಣ ವಿವರಗಳನ್ನು ಒದಗಿಸುವುದು)
ಇ) ಕರಾವಳಿ ನಿಯಂತ್ರಣ ಹೊರತುಪಡಿಸಿದ ವಲಯ (Non CRZ) ದಲ್ಲಿ ಮರಳು ತೆಗೆಯಲು ಅನುಮತಿ ನೀಡುವಲ್ಲಿ ಇರುವ ಮಾನದಂಡಗಳೇನು;
ಈ) ಪ್ರಸ್ತುತ ಕರಾವಳಿ ನಿಯಂತ್ರಣ ಹೊರತುಪಡಿಸಿದ ವಲಯದಲ್ಲಿ ಮರಳು ತೆಗೆಯಲು ಎಷ್ಟು ಮಂದಿಗೆ ಅನುಮತಿ ನೀಡಲಾಗಿದೆ? (ಹೆಸರು ಸಹಿತ ಸಂಪೂರ್ಣ ವಿವರಗಳನ್ನು ಒದಗಿದುವುದು)

----

15/4/1197

**ವಿದ್ಯುತ್ ಅವಗಡಗಳು**

**1062 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಎಷ್ಟು ರೈತರು ಹಣವನ್ನು ಪಾವತಿಸಿರುತ್ತಾರೆ; (ತಾಲ್ಲೂಕುವಾರು ವಿವರ ನೀಡುವುದು)
ಆ) ರೈತರು ಹಣ ಪಾವತಿಸಿ ಎರಡು ವರ್ಷವಾದರೂ ಇಲ್ಲಿಯವರೆಗೆ ಪರಿವರ್ತಕಗಳನ್ನಾಗಲೀ ಅಥವಾ ವಿದ್ಯುತ್ ಸಂಪರ್ಕವನ್ನಾಗಲೀ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ವಿಳಂಬವಾಗಲು ಕಾರಣಗಳೇನು;
ಈ) ರೈತರಿಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕವನ್ನು ನೀಡಿ ಸಕ್ರಮಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

----

15/4/1198

**ಅಕ್ರಮ ವಿದ್ಯುತ್ ಸಂಪರ್ಕಗಳ ಸಕ್ರಮ**

**1063 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಎಷ್ಟು ರೈತರು ಹಣವನ್ನು ಪಾವತಿಸಿರುತ್ತಾರೆ; (ತಾಲ್ಲೂಕುವಾರು ವಿವರ ನೀಡುವುದು)
ಆ) ರೈತರು ಹಣ ಪಾವತಿಸಿ ಎರಡು ವರ್ಷವಾದರೂ ಇಲ್ಲಿಯವರೆಗೆ ಪರಿವರ್ತಕಗಳನ್ನಾಗಲೀ ಅಥವಾ ವಿದ್ಯುತ್ ಸಂಪರ್ಕವನ್ನಾಗಲೀ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ವಿಳಂಬವಾಗಲು ಕಾರಣಗಳೇನು;
ಈ) ರೈತರಿಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕವನ್ನು ನೀಡಿ ಸಕ್ರಮಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

----

15/4/1199

## ಸಾರಿಗೆ ಸಂಸ್ಥೆಗಳ ಬಸ್

**1064 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಸಾರಿಗೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ವಿವಿಧ ಮಾದರಿಯ ಎಷ್ಟು ಬಸ್‌ಗಳನ್ನು ಖರೀದಿಸಿ, ರಸ್ತೆ ಸಾರಿಗೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ; ಇದಕ್ಕೆ ತಗುಲಿದ ವೆಚ್ಚವೆಷ್ಟು; ಈ ಸಂಸ್ಥೆಗಳಿಗೆ ಯಾವ ಆಧಾರದ ಮೇಲೆ ಬಸ್‌ಗಳನ್ನು ಹಂಚಿಕೆ ಮಾಡಲಾಗುತ್ತಿದೆ; ಇಲ್ಲಿಯವರೆಗೆ ಎಷ್ಟು ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ; (ವಿಭಾಗವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)
ಆ) ಒಂದು ಬಸ್ಸನ್ನು ಗರಿಷ್ಠ ಎಷ್ಟು ಕಿ.ಮೀ. ಓಡಿಸಬೇಕೆಂಬ ನಿಯಮವಿದೆ; ರಾಜ್ಯದಲ್ಲಿ 5 ಲಕ್ಷ ಕಿ. ಮೀ ಗಿಂತಲೂ ಹೆಚ್ಚಾಗಿ ಓಡಿಸುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು;
ಇ) ಬೆಳಗಾವಿ ಮತ್ತು ಚಿಕ್ಕೋಡಿ ವಿಭಾಗಗಳಲ್ಲಿ ಕೆಲವೊಂದು ಬಸ್‌ಗಳು ನಿಗದಿತ ಕಿ.ಮೀ ಮೀರಿ ಹಾಗೂ ನಿಷ್ಕ್ರೀಯ ಸ್ಥಿತಿಗೆ ತಲುಪಿದ ಬಸ್‌ಗಳನ್ನು ಓಡಿಸಲಾಗುತ್ತಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಹಾಗಿದ್ದಲ್ಲಿ, ಬೆಳಗಾವಿ ಮತ್ತು ಚಿಕ್ಕೋಡಿ ವಿಭಾಗಗಳ ಹಳೆಯ ಬಸ್‌ಗಳನ್ನು ವಾಪಸ್ಸು ಪಡೆದು ಹೊಸ ಬಸ್‌ಗಳನ್ನು ಒದಗಿಸಲು ಸಕಾರ್|ರ ಕೈಗೊಂಡ ಕ್ರಮಗಳೇನು?

----

15/4/1200

## ಖಾಲಿ ಇರುವ ಹುದ್ದೆಗಳು

**1065 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಮುಖ್ಯ ಮಂತ್ರಿಗಳು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳೆಷ್ಟು; (ಇಲಾಖಾವಾರು ಮತ್ತು ಜಿಲ್ಲಾವಾರು ವಿವರ ನೀಡುವುದು)
ಆ) ಹುದ್ದೆಗಳು ಖಾಲಿ ಇರುವುದರಿಂದ ಸುಗಮ ಆಡಳಿತಕ್ಕೆ ಮತ್ತು ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಹಿನ್ನಡೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕಾಲಮಿತಿಯನ್ನು ಹಾಕಿಕೊಂಡಿದೆಯೇ? (ಮಾಹಿತಿ ನೀಡುವುದು)

----

**ಬೆಂಗಳೂರು - 560001.** **ಎಂ.ಕೆ. ವಿಶಾಲಾಕ್ಷಿ,**
**ಮಂಗಳವಾರ, 23ನೇ ಜುಲೈ, 2019.** **ಕಾರ್ಯದರ್ಶಿ (ಪ್ರ)**